# <u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,ರವರ ನ್ಯಾಯಾಲಯ, ಶೃಂಗೇರಿ</u>

**ಸಿ.ಸಿ.ನಂಃ 276/2025**

**ಫಿರ್ಯಾದುದಾರರುಃ** ಸರ್ಕಾರದ ಪರವಾಗಿ ಶೃಂಗೇರಿ ಪೊಲೀಸರು

-: **ವಿರುದ್ಧ** :-

**ಆರೋಪಿಃ** ಅಮಿತ್ ಎಸ್.ಎನ್.
ಬಿನ್ ನಾರಾಯಣಗೌಡ,
ವಯಸ್ಸು 22 ವರ್ಷ,
ವಾಸಃ ಸಿಗಸೆ, ತೂಪ್ಪೂರು, ಹಿರೇಗದ್ದೆ ಗ್ರಾಮ,
ಮೇಲ್‌ಪಲ್ ಅಂಚೆ, ಕೊಪ್ಪ ತಾಲ್ಲೂಕು.

## ದೋಷಾರೋಪಣೆ

ಶ್ರೀ. ಜೀತು ಆರ್.ಎಸ್., ಬಿ.ಎ.ಎಲ್., ಎಲ್‌ಎಲ್.ಎಂ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ., ಶೃಂಗೇರಿ ಆದ ನಾನು ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕಃ 23.06.2025 ರಂದು ಸಂಜೆ 7.45 ಗಂಟೆಗೆ ಶೃಂಗೇರಿ ಪೋಲೀಸ್ ಠಾಣಾ ಸರಹದ್ದಿನ ಶೃಂಗೇರಿ ತಾಲ್ಲೂಕು ಅಡ್ಡಗದ್ದೆ ಗ್ರಾಮದ ಎ-1 ಬನಾನ ಚಿಪ್ಸ್ ಅಂಗಡಿಯ ಮುಂಭಾಗ ಆರೋಪಿಯಾದ ನೀವು ಚಾಸಾ-13 ರವರ ಬಾಬ್ತು ವಾಹನ ಸಂಖ್ಯೆ ಕೆ.ಎ.-20-ಎಂ-9845 ಮಾರುತಿ ಆಲ್ಟೋ ಕಾರನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಪಿರ್ಯಾದುದಾರರ ತಂದೆಗೆ ಅಪಘಾತ ಉಂಟುಮಾಡಿದ ಪರಿಣಾಮ ಅವರ ತಲೆಗೆ, ಎಡ ಕಾಲಿನ ಮೊಣಕಾಲಿನ ಕೆಳಭಾಗದ ಮೂಳೆ ಮುರಿದಿರುತ್ತದೆ ಮತ್ತು ಬಲ ಭುಜದ ಹತ್ತಿರ ತರಚಿದ ಗಾಯವಾಗಿದ್ದು ಅಭಿನವ ವಿದ್ಯಾತೀರ್ಥ ಆಸ್ಪತ್ರೆ, ಶೃಂಗೇರಿಯಲ್ಲಿ ಮರಣ ಹೊಂದಿರುತ್ತಾರೆ. ಈ ರೀತ್ಯ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 106(1) ರಂತೆ ದಂಡೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ನಿಮ್ಮ ಬಾಬ್ತು ವಾಹನ ಕೆ.ಎ.-20-ಎಂ-9845 ಮಾರುತಿ ಆಲ್ಟ್ೋ ಕಾರನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಪಿರ್ಯಾದುದಾರರ ತಂದೆಗೆ ಅಪಘಾತ ಉಂಟುಮಾಡಿರುತ್ತೀರಿ. ಈ ರೀತ್ಯ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 281 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಸದರಿ ಮೇಲ್ಕಂಡ ಆರೋಪಿಯಾದ ನೀವು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮೇಲೆ ಹೇಳಿದ ಅಪರಾದಗಳನ್ನು ಮಾಡಿದ್ದರಿಂದ, ಅವುಗಳು ಈ ನ್ಯಾಯಾಲಯದಿಂದ ವಿಚಾರಣೆ ಆಗತಕ್ಕದ್ದೆಂದು ಆದೇಶಿಸಲಾಗಿದೆ.

**ಪ್ರಶ್ನೆ-1** : ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದಿರಾ? ಅವುಗಳು ನಿಮಗೆ ಅರ್ಥವಾಯಿತೇ?

**ಉತ್ತರ** : ಅರ್ಥವಾಯಿತು.

**ಪ್ರಶ್ನೆ-2** : ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

**ಉತ್ತರಃ** : ವಿಚಾರಣೆಯಾಗಬೇಕು.

(ಈ ಮೇಲ್ಕಂಡ ದೋಷಾರೋಪಣೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.)

**ದಿನಾಂಕಃ** ಸಹಿ/- 18.12.2025.

**(ಜೀತು ಆರ್.ಎಸ್.)**
**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,**
**ಶೃಂಗೇರಿ.**

**ಆರೋಪಿಯ ಸಹಿಃ**